ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅರಸೀಕೆರೆ ಉಪವಿಭಾಗ
ಫೋನ್: 08174-233607

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
ARSIKERE Sub Division
Web Site:www.cescmysore.org
Email: aeecescask@gmail.com
Company Identity Number(CIN):- U40109KA2004SGC035177

ಸಂಖ್ಯೆ: ಸ.ಕಾ.ಇಂ(ವಿ)/ಸ.ಇಂ(ತಾ)./ಅಕೆರೆ/2021-22/4483-89 ದಿನಾಂಕ: 30/08/2021

## * ಜನ ಸಂಪರ್ಕ ಸಭೆಯ ನಡಾವಳಿಗಳು *

ದಿನಾಂಕ: 26.08.2021 ರಂದು ಬೆಳ್ಳಗ್ಗೆ 11.00 ಘಂಟೆಗೆ ಸೆಸ್ಕ್ ಅರಸೀಕೆರೆ ಉಪವಿಭಾಗ ಕಛೇರಿಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಸಮ್ಮುಖದಲ್ಲಿ ನಡೆದ ತ್ರೈಮಾಸಿಕ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಜೆ.ಕಾರ್ತಿಕ್, ಕಾ.ಇಂ(ವಿ), ಸೆಸ್ಕ್,ಅರಸೀಕೆರೆ ವಿಭಾಗ. ಅರಸೀಕೆರೆ
2. ಶ್ರೀ ಕೆ.ಪಿ ಜಯಪ್ಪ .ಸ.ಕಾ.ನಿ.ಇ(ವಿ),ಸೆಸ್ಕ್, ಅರಸೀಕೆರೆ ಉಪ ವಿಭಾಗ, ಅರಸೀಕೆರೆ
3. ಕು|| ವಿನುತ ಈ., ಸ.ಇಂ(ತಾ). ಸೆಸ್ಕ್, ತಾಂತ್ರಿಕ ಶಾಖೆ. ಅರಸೀಕೆರೆ ಉಪ ವಿಭಾಗ.
4. ಶ್ರೀ ದೇವರಾಜು, ಸ.ಲೆ.ಅ, ಸೆಸ್ಕ್, ಅರಸೀಕೆರೆ ಉಪ ವಿಭಾಗ,
5. ಶ್ರೀ ಮಂಜುನಾಥ ಬಿ.ಎನ್.ಸ.ಇಂ(ವಿ), ಸೆಸ್ಕ್, ಮಾರುತಿನಗರ ಶಾಖೆ. ಅರಸೀಕೆರೆ ಉಪ ವಿಭಾಗ.
6. ಶ್ರೀ ಅರವಿಂದಕುಮಾರ್ ಬಿ.ವಿ..ಸ.ಇ(ವಿ), ಸೆಸ್ಕ್, ಅರಸೀಕೆರೆ ಶಾಖೆ. ಅರಸೀಕೆರೆ ಉಪ ವಿಭಾಗ.
7. ಶ್ರೀ ಚಿಕ್ಕನಾಯಕ, ಶಾಖಾಧಿಕಾರಿಗಳು, ಸೆಸ್ಕ್,ಬೆಳಗುಂಬ ಶಾಖೆ. ಅರಸೀಕೆರೆ ಉಪ ವಿಭಾಗ.
8. ಶ್ರೀ ದಿಲೀಪ್ ನಾಯಕ, ಶಾಖಾಧಿಕಾರಿಗಳು, ಸೆಸ್ಕ್, ಹಾರನಹಳ್ಳಿ ಶಾಖೆ. ಅರಸೀಕೆರೆ ಉಪ ವಿಭಾಗ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಅರಸೀಕೆರೆ ಉಪವಿಭಾಗ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು, ಶಾಖಾಧಿಕಾರಿಗಳನ್ನು ಹಾಗೂ ಗ್ರಾಹಕರನ್ನು ಸ್ವಾಗತಿಸಿ ಕುಂದುಕೊರತೆಗಳನ್ನು ತಿಳಿಸಲು ಉದ್ದೇಶಿಸಿ ಮಾತನಾಡಿದರು.

| ಕ್ರ ಸಂ | ಗ್ರಾಹಕರ ಕುಂದು ಕೊರತೆಗಳು | ನಡಾವಳಿಯ ಸೂಚನೆಗಳು |
|---|---|---|
| 1 | ಶ್ರೀ ರಾಮಚಂದ್ರ, ವರದಿಗಾರರು, ವಿಜಯವಾಣಿ ದಿನಪತ್ರಿಕೆ,ಅರಸೀಕೆರೆ ರವರು ವಿದ್ಯಾನಗರ ಅಲ್ ಅಮೀನ್ ಶಾಲೆ ಹತ್ತಿರ ವಿದ್ಯುತ್ ಲೈನ್‌ಗಳು ಪದೇ ಪದೇ ಶಾರ್ಟ ಆಗುತ್ತಿದ್ದು ಅದನ್ನು ಸರಿಪಡಿಸಿಕೊಡಲು ತಿಳಿಸಿದರು. | ಸಂಬಂಧಿಸಿದ ಶಾಖಾ ವ್ಯಾಪ್ತಿಯ ಸಹಾಯಕ ಇಂಜಿನಿಯರ್(ವಿ) ರವರಿಗೆ ಪರಿವರ್ತಕದ ತಪಾಸಣೆ ಮಾಡಿ. ಜಂಗಲ್ ಕಟಿಂಗ್ ಹಾಗೂ ಇಳಿ ಬಿದ್ದಿರುವ ವಿದ್ಯುತ್ ತಂತಿಗಳನ್ನು ಬಿಗಿಗೊಳಿಸಿ ಎಲ್.ಟಿ ಸ್ಪೇಸರ್ ಅಳವಡಿಸಲು ಸೂಚಿಸಲಾಯಿತು. |
| 2 | ಶ್ರೀ ಶಶಿಧರ, ಸಾಮಾಜಿಕ ಹೊರಾಟಗಾರರು, ಅರಸೀಕೆರೆ ರವರು ಮಾತನಾಡಿ ಕೃಷಿ ಪಂಪ್‌ಸೆಟ್‌ಗೆ ಮಾಪಕ ಅಳವಡಿಸುವ ಪ್ರಸ್ತಾವನೆ ಗಮನಕ್ಕೆ ಬಂದಿದ್ದು ಅದನ್ನು ವಿರೋದಿಸುತ್ತೇವೆ ಎಂದು ತಿಳಿಸಿದರು. | ನಿಗಮವು ತೆಗೆದುಕೊಳ್ಳುವ ನಿರ್ಧಾರಗಳಿಗೆ ಹಾಗೂ ನಿಯಮಗಳನ್ನು ಪಾಲಿಸಲಾಗುವುದು ಎಂದು ತಿಳಿಸಲಾಯಿತು. |
| 3 | ಶ್ರೀ ಎಸ್ ಮಂಜುನಾಥ, ಕಾಯರ್ ಇಂಡಸ್ಟ್ರೀ ಕೆಂಪುಸಾಗರ, ಇವರು ಮಾತನಾಡಿ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬೇಕೆಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ ಕಾಮಗಾರಿಯು ಅವಾರ್ಡ ನೀಡುವ ಹಂತದಲ್ಲಿದ್ದು ಶೀಘ್ರವಾಗಿ ಕಾಮಗಾರಿ ಕೈಗೊಳ್ಳಲಾಗುವುದೆಂದು ತಿಳಿಸಿದರು. |
| 4 | ಶ್ರೀ ಜೆ,ಪಿ ಭಕ್ತವತ್ಸಲ, ಲಕ್ಷ್ಮೀಪುರ ಅರಸೀಕೆರೆ ,ಇವರು ಮಾತನಾಡಿ F-4 ಅರಸೀಕೆರೆ ನಗರ ಫೀಡರ್ ಪದೇ ಪದೇ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದೆ ಸರಿಪಡಿಸಿಕೊಡಬೇಕೆಂದು ಕೋರಿದರು. | F-4 ಅರಸೀಕೆರೆ ನಗರ ಫೀಡರ್‌ನ ಹೊರೆಯನ್ನು ವಿಭಜನೆ ಮಾಡಲು ಈಗಾಗಲೇ ಅಂದಾಜುಪಟ್ಟಿ ತಯಾರಿಸಿದ್ದು ಶೀಘ್ರದಲ್ಲಿ ಕಾರ್ಯಾದೇಶ ನೀಡಿ ಕಾಮಗಾರಿ ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. |

Scanned with CamScanner

| | | |
|---|---|---|
| 5 | ಶ್ರೀ ಜಾನ್ ರುಸಾರಿಯೋ ಅರಸೀಕೆರೆ ರವರು ಮಾತನಾಡಿ ಕೆಲವೊಂದು ಸಂದರ್ಭಗಳಲ್ಲಿ ಹೆಚ್ಚಿನ ವೋಲ್ಟೇಜ್ ಗೃಹಬಳಕೆ ಸ್ಥಾವರಗಳಿಗೆ ಸರಬರಾಜು ಆಗುತ್ತಿದ್ದು, ಗೃಹಪಯೋಗಿ ಉಪಕರಣಗಳಿಗೆ ಹಾನಿ ಸಂಭವಿಸುವ ಸಂದರ್ಭವಿರುತ್ತದೆ ಎಂದು ಅದನ್ನು ಸರಿಪಡಿಸಲು ಕೋರಿದರು. | ಸಂಬಂಧಿಸಿದ ವ್ಯಾಪ್ತಿಯ 110/11 ಕೆ.ವಿ ವಿದ್ಯುತ್ ವಿತಾರಣಾ ಕೇಂದ್ರದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಟ್ಯಾಪ್ ಸೆಟ್ಟಿಂಗ್ ಮಾಡಲು ಸೂಚನೆ ನೀಡಲಾಗುವುದೆಂದು ತಿಳಿಸಲಾಯಿತು. |
| 6 | ಶ್ರೀ ಮೂರ್ತಿ, ಸೈದರಹಳ್ಳಿ, ರವರು 63 ಕೆ.ವಿ.ಎ ಕೃಷಿ ಪಂಪ್ ಸೆಟ್ ಪರಿವರ್ತಕ ವಿಫಲಗೊಂಡಿದ್ದು ತುರ್ತಾಗಿ ಒದಗಿಸಲು ಕೋರಿದರು. | ಉಗ್ರಾಣದಲ್ಲಿ ಲಭ್ಯವಿದ್ದ 63 ಕೆ.ವಿ.ಎ ಪರಿವರ್ತಕವನ್ನು ವಿತರಣೆ ಮಾಡಲಾಯಿತು. |

ಈ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಹಾಜರಿದ್ದ ಎಲ್ಲಾ ಗ್ರಾಹಕರನ್ನು ಉದ್ದೇಶಿಸಿ ಮಾತನಾಡಿ, ಗ್ರಾಹಕರ ಕುಂದು ಕೊರತೆಗಳನ್ನು ಸೆಸ್ಕ್ ಸಹಾಯವಾಣಿ 1912 ಕ್ಕೆ ಕರೆಮಾಡಿ ದೂರನ್ನು ದಾಖಲಿಸಲು ಸೂಚಿಸಿದರು ಹಾಗೂ ಯಾವುದೇ ವಿಧವಾದ ಶಾರ್ಟ್ ಸರ್ಕ್ಯೂಟ್‌ನಿಂದ ಹಾನಿ ಉಂಟಾದಲ್ಲಿ ದೂರು ಸಲ್ಲಿಸಿದ ತಕ್ಷಣ ಕರ್ನಾಟಕ ಸರ್ಕಾರದ ವಿದ್ಯುತ್ ಪರಿವೀಕ್ಷಕರಿಂದ ತಪಾಸಣೆ ಮಾಡಿಸಿ ನಿಗಮದ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದೆಂದು ಸಲಹೆ ನೀಡಿದರು. ಕಟ್ಟಡ ನಿರ್ಮಾಣ ಮಾಡುವಾಗ CEA Regulation ಪ್ರಕಾರ ಅಂತರ ಕಾಪಾಡಿಕೊಂಡು ಸುರಕ್ಷಿತವಾಗಿ ಕಟ್ಟಡ ನಿರ್ಮಾಣ ಮಾಡಬೇಕೆಂದು ತಿಳಿಸಿ, ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮಧ್ಯಾಹ್ನ 1.00 ಕ್ಕೆ ಮುಕ್ತಾಯಗೊಳಿಸಲಾಯಿತು.

30/08/24

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್ ಉಪ ವಿಭಾಗ, ಅರಸೀಕೆರೆ

**ಪ್ರತಿಗಳು:-**

1. ಮುಖ್ಯ ಇಂಜಿನಿಯರ್(ವಿ) ಕಾ ಮತು ಪಾ ವಲಯ ಕಛೇರಿ, ಸೆಸ್ಕ್ ಹಾಸನ.ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ
2. ಅಧೀಕ್ಷಕ ಇಂಜಿನಿಯರ್(ವಿ) ಕಾ ಮತ್ತು ಪಾ ವೃತ್ತ ಕಛೇರಿ, ಸೆಸ್ಕ್, ಹಾಸನ ರವರ ಆದ್ಯ ಅವಗಾಹನೆಗಾಗಿ ಸಲ್ಲಿಸಿದೆ
3. ಕಾರ್ಯಪಾಲಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ ಕಛೇರಿ, ಸೆಸ್ಕ್,ಅರಸೀಕೆರೆ ರವರ ಮಾಹಿತಿಗಾಗಿ.
4. ಎಲ್ಲಾ ಶಾಖಾಧಿಕಾರಿಗಳು(ವಿ) ಸೆಸ್ಕ್ ಅರಸೀಕೆರೆ ಉಪ ವಿಭಾಗ ರವರ ಮಾಹಿತಿಗಾಗಿ.
5. ಕಛೇರಿ ಪ್ರತಿ.



Scanned with CamScanner